ನಿಪ್ಪಾಣಿ ಮತಕ್ಷೇತ್ರದಲ್ಲಿ ಎಷ್ಟು ಕೆಲಸವಾಗಿದೆಯೆನ್ನುವ ಮಾಹಿತಿ ಬೇಕಾಗಿದ್ದರೆ ಅದರ ವಿವರಗಳನ್ನು ನಂತರ ಒದಗಿಸಿಕೊಡುತ್ತೇನೆ.

ಬಚಾವತ್ ತೀರ್ಪಿನಂತೆ ಕೃಷ್ಣ ನೀರಿನ ಬಳಕೆ

847: ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ):– ಮಾನ್ಯ ಉಪಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಬಚಾವತ್ ತೀರ್ಪಿನಂತೆ 2000ನೇ ಇಸವಿಯ ವೇಳೆಗೆ 733 ಟಿಎಂಸಿ ನೀರನ್ನು ರಾಜ್ಯವು ಉಪಯೋಗಿಸಿಕೊಳ್ಳಬೇಕಾಗಿರುವುದು ಸರ್ಕಾರಕ್ಕೆ ತಿಳಿದಿದೆಯೇ;

ಆ. ಹಾಗಿದ್ದಲ್ಲಿ, ಅದಕ್ಕೆ ಬೇಕಾಗಿರುವ ಹಣವೆಷ್ಟು ಮತ್ತು ಇಲ್ಲಿಯವರೆವಿಗೂ ಖರ್ಚು ಮಾಡಿರುವ ಹಾಗೂ ಬಾಕಿ ಬೇಕಾಗಿರುವ ಹಣವೆಷ್ಟು. (ಪ್ರತ್ಯೇಕ ವಿವರ ನೀಡುವುದು);

ಇ. ಸರ್ಕಾರ ಇಲ್ಲಿಯವರೆಗೂ ಒದಗಿಸಿರುವ ಹಣ ಸಾಲದೆಂಬುದು ಸರ್ಕಾರಕ್ಕೆ ತಿಳಿದಿದೆಯೇ;

ಈ. ಹಾಗಿದ್ದಲ್ಲಿ, ಅದನ್ನು ಪೂರ್ಣಗೊಳಿಸಲು ಹಣ ಪೂರೈಸಲು ಸರ್ಕಾರದ ಕ್ರಮಗಳೇನು ?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯ ಮಂತ್ರಿಗಳು):–

ಅ. ಹೌದು.

ಆ. ಕೃಷ್ಣಾ ಕೊಳ್ಳದ ಯೋಜನೆಗಳ ಮೇಲೆ 31.3.92ರವರೆಗೆ ಮಾಡಿರುವ ವೆಚ್ಚ ರೂ. 1806 ಕೋಟಿಗಳು. ಎಲ್ಲಾ ಯೋಜನೆಗಳನ್ನು ಪೂರ್ಣಗೊಳಿಸಲು ಬೇಕಾಗಿರುವ ಬಾಕಿ ಹಣ ರೂ. 4136 ಕೋಟಿಗಳು. (1.4.92ರ ದರಗಳ ಪ್ರಕಾರ)

ಇ. ಇಲ್ಲಿಯವರೆಗೆ ಒದಗಿಸಿರುವ ಹಣ ರಾಜ್ಯದ ಸಂಪನ್ಮೂಲವನ್ನಾಧರಿಸಿದೆ.

ಈ. ಎಲ್ಲಾ ಯೋಜನೆಗಳನ್ನು ನಿಯಮಿತ ಅವಧಿಯೊಳಗೆ ಪೂರ್ಣಗೊಳಿಸಲು ಅವಶ್ಯವಿರುವ ಹಣವನ್ನು ಒದಗಿಸುವ ಬಗ್ಗೆ ಸರ್ವಪ್ರಯತ್ನ ಮಾಡಲಾಗುತ್ತಿದೆ.

ಶ್ರೀ ಟಿ.ಬಿ. ಜಯಚಂದ್ರ:– ಮಾನ್ಯ ಅಧ್ಯಕ್ಷರೇ, ನನ್ನ ಪ್ರಶ್ನೆಗೆ ಮಾನ್ಯ ಉಪ ಮುಖ್ಯ ಮಂತ್ರಿಗಳು ತಮ್ಮ ಇಲಾಖಾ ಬೇಡಿಕೆಗಳ ಮೇಲೆ ಉತ್ತರ ಕೊಡುವಂಥ ಸಂದರ್ಭದಲ್ಲಿ ಬಚಾವತ್ ತೀರ್ಪಿನ ಪ್ರಕಾರ ನೀರನ್ನು ಉಪಯೋಗಿಸಿಕೊಳ್ಳತಕ್ಕಂಥ ಹಕ್ಕು ಅದು ಸರ್ಕಾರದ ಪ್ರತಿಷ್ಠೆ ಪ್ರಶ್ನೆ ಮತ್ತು ಈ ರಾಜ್ಯದ ಎಲ್ಲಾ ಜನರ ಹಕ್ಕು ಎನ್ನತಕ್ಕಂಥ ಮಾತನ್ನು ಹೇಳಿದಿರಿ ಮತ್ತು ಅದಕ್ಕೆ ಯಾವ್ಯಾವ ತರಹವಾದ ಹಣವನ್ನು ಕೂಡಿಸಬೇಕೆನ್ನುವುದರ ಬಗ್ಗೆಯೂ ಹೇಳಿದಿರಿ. ಆದರೆ, ಈಗ ತಾವು ನನಗೆ ಒದಗಿಸಿರತಕ್ಕಂಥ ಉತ್ತರದಲ್ಲಿ ಕಾಣುತ್ತಿರತಕ್ಕಂಥಾದ್ದು, ಬಚಾವತ್ ತೀರ್ಪು ಬಂದು ಸುಮಾರು 17 ವರ್ಷಗಳಾಯಿತು. ಅಂದಿನಿಂದ ಇಂದಿನವರೆಗೆ ನೀವು ಖರ್ಚು ಮಾಡಿರತಕ್ಕಂಥ ಹಣ 1806 ಕೋಟಿ ರೂಪಾಯಿಗಳು,ಇನ್ನು ನಿಮಗೆ ಉಳಿದಿರತಕ್ಕಂಥ ಕಾಲ ಕೇವಲ ಏಳು ವರ್ಷಗಳು ಮಾತ್ರ. ಈ ಏಳು ವರ್ಷಗಳಲ್ಲಿ ನೀವು 4136 ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕಾಗಿದೆ. ಅಲ್ಲದೆ, ವರ್ಷದಿಂದ ವರ್ಷಕ್ಕೆ ಎಸ್ಕಲೇಷನ್ ಚಾರ್ಜ್ ಹೆಚ್ಚಾಗುತ್ತಾ ಹೋಗುತ್ತದೆ. ಈಗಾಗಲೇ ಹದಿನೇಳು ವರ್ಷಗಳಿಂದ ನೀರನ್ನು ಉಪಯೋಗಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲದಿಂದ ನೀವು ನಿಮ್ಮ ಸ್ಥಾನದಲ್ಲಿ ಮುಂದೆ ಇರುವುದಿಲ್ಲ, ಬೇರೆಯವರು ಇರುವಂಥ ಪ್ರಶ್ನೆ ಬಂದಾಗ ಒಂದು ವರ್ಷಕ್ಕೆ ಸುಮಾರು 600–700 ಕೋಟಿ ರೂಪಾಯಿಗಳಷ್ಟು ಹಣ ಖರ್ಚು ಮಾಡಬೇಕಾಗುತ್ತದೆ. ಅದಕ್ಕೋಸ್ಕರ, ನನಗೆ ಅನುಮಾನವಿದೆಯೆಂದು ಕೇಳುತ್ತಿದ್ದೇನೆ. ಈಗ ಒಂದು ವೇಳೆ ಟ್ರಿಬ್ಯೂನಲ್ ಆದೇಶದ ಪ್ರಕಾರ ಕ್ರಿ.ಶ.

2000 ಇಸವಿಯೊಳಗೆ ಈ ಯೋಜನೆಯನ್ನು ಮುಗಿಸುವುದಕ್ಕಾಗುವುದಿಲ್ಲವೆಂದು ಇಟ್ಟುಕೊಳ್ಳೋಣ, ಆಗ ನೀವು (ಸರ್ಕಾರ) ನೀರಿನ ಮೇಲಿನ ಹಕ್ಕನ್ನು ಕಳೆದುಕೊಳ್ಳುತ್ತೀರಾ ? ಹೌದೇ ಇಲ್ಲವೇ ಎಂಬುದನ್ನು ತಿಳಿಸಬೇಕು.

SRI S.M. KRISHNA:– Sir, according to the rule of procedure, I am not expeceted to answer hypothetical questions.

ಆದರೆ, ನಿಯೋಜಿತ ವೆಚ್ಚಗಳನ್ನು ನಾನು ಏನು ಸೂಚನೆ ಮಾಡಿದ್ದೇನೆ, ಅದಕ್ಕೆ ಒಂದು ಕಾರಣವಿತ್ತು. ಆ ಕಾರಣವೇನೆಂದರೆ, 'ಮುಂದೆ ನಾನು ಇರುವುದಿಲ್ಲ' ಎನ್ನುವ ಮಾತನ್ನು ತಾವು ಹೇಳುತ್ತಿದ್ದೀರಿ. ಅದು ಭವಿಷ್ಯದ ಮಾತು, ಕಾಲಗರ್ಭದಲ್ಲಿ ಏನೇನು ಅಡಗಿದೆ ಎಂಬುದು ನಾನು ಹೇಳುವುದಕ್ಕೆ ಸಾಧ್ಯವಿಲ್ಲ, ನೀವೂ ಕೂಡ ಹೇಳುವುದಕ್ಕೆ ಸಾಧ್ಯವಿಲ್ಲ. ನಾನು ಮತ್ತೆ ಇದೇ ಸ್ಥಾನದಲ್ಲಿ ಕುಳಿತಿದ್ದರೆ ನಿಮಗೆ ಆಶ್ಚರ್ಯವಾಗಬಹುದು. ಆದುದರಿಂದ, ನಾನು ಇಲ್ಲಿ ಕುಳಿತಿದ್ದರೆ ಆ ರೀತಿ ಮಾಡಬೇಕೆನ್ನುವಂಥದ್ದು, ಮತ್ತು ಇನ್ನೊಂದು ಮಾತನ್ನು ಹೇಳಿದೆ. ಏನೆಂದರೆ, ಈ ಸ್ಥಾನದಲ್ಲಿ ಯಾರೇ ಬಂದು ಕುಳಿತಿರಲಿ, ಅವರ ಮೇಲೆ ಸಾರ್ವಜನಿಕ ಒತ್ತಡವೇನಿದೆ, ಜನತೆಯ ಸ್ಯಾಂಕ್ಷನ್ ಏನಿದೆ, It is a mandatory that thay will have to fall in line with the time schedule, with that kind of expenediture which is needed for the completion of these Krishna basin projects.

ಶ್ರೀ ಟಿ.ಬಿ. ಜಯಚಂದ್ರ:– ನಾನು ಕೇಳಿರತಕ್ಕದ್ದು ಹೈಪಾಥಿಟಿಕಲ್ ಆಗುತ್ತದೆಂದು ಹೇಳಿದ್ದೀರಿ. ಆದರೆ ಮುಂದೆ 7 ವರ್ಷದಲ್ಲಿ ನಾಲ್ಕು ಸಾವಿರ ಕೋಟಿ ರೂಪಾಯಿಗಳನ್ನು ಇದಕ್ಕೆ ಖರ್ಚು ಮಾಡುತ್ತೇವೆಂದು ತಾವು ಏನುಹೇಳುತ್ತಿದ್ದೀರಿ. ಅದು ಹೈಪಾಥಿಟಿಕಲ್ ಅಲ್ಲವೇ ?

ಶ್ರೀ ಎಸ್.ಎಂ. ಕೃಷ್ಣ:– 17 ವರ್ಷಗಳಿಂದ ಏನು ನಡೆಯಿತು ಎನ್ನತಕ್ಕ ಬಗ್ಗೆ ಇವತ್ತು ಪೋಸ್ಟ್ ಮಾರ್ಟಮ್ ಮಾಡುವುದರಿಂದ ಜಯಚಂದ್ರರವರಿಗಾಗಲಿ ನನಗಾಗಲಿ ಪ್ರಯೋಜನವಾಗುವುದಿಲ್ಲ. ಆದುದರಿಂದ ನಾವು ಒಟ್ಟಾರೆಯಾಗಿ ಭವಿಷ್ಯದಲ್ಲಿ ಯಾವ ರೀತಿಯಾಗಿ ಇರಬೇಕೆಂಬುದನ್ನು ಗಮನದಲ್ಲಿಟ್ಟಕೊಂಡು ಮುಂದಿನ 7 ವರ್ಷಗಳಲ್ಲಿ ಎಷ್ಟು ಖರ್ಚು ಮಾಡಬಹುದು ಎಂಬುದನ್ನು ಗಮನಿಸಿ ಅಷ್ಟನ್ನು ಮಾಡುವುದಕ್ಕೆ ಪ್ರಯತ್ನ ಮಾಡೋಣ.

ಶ್ರೀ. ವೈ.ಕೆ. ರಾಮಯ್ಯ:– ಸನ್ಮಾನ್ಯ ಅಧ್ಯಕ್ಷರೇ, ಸರ್ಕಾರದ ಪ್ರಾಮಾಣಿಕತೆಯ ಬಗ್ಗೆ ನನಗೆ ಅನುಮಾನವಿಲ್ಲ, ಅವರುಗಳು ಇದರ ದಿಸೆಯಲ್ಲಿ ಪ್ರಯತ್ನ ಮಾಡುತ್ತಿಲ್ಲವೆಂದು ನನ್ನ ಆಪಾದನೆ ಅಲ್ಲ, ಅವರು ಉತ್ತರ ಕೊಡುವಾಗ ಸರ್ಕಾರ ಅವಶ್ಯಕತೆ ಇರುವಷ್ಟೂ ಹಣವನ್ನು ಒದಗಿಸುವ ಬಗ್ಗೆ ಸರ್ವಪ್ರಯತ್ನವನ್ನು ಮಾಡುತ್ತೇವೆ ಎನ್ನತಕ್ಕ ಮಾತನ್ನು ಹೇಳಿದ್ದಾರೆ. ಈ ರಾಜ್ಯದ ಜನತೆಗೆ ಮತ್ತು ನಮಗೆ ಆ ಒಂದು ತಮ್ಮ ಸರ್ವಪ್ರಯತ್ನದ ಒಂದು ನಿರ್ದಿಷ್ಟವಾದ ಕಾರ್ಯಕ್ರಮಗಳು ಯಾವುದು ಎಂದು ಹೇಳಬೇಕು. ಅವರನ್ನು ನಾವು ಗೊಂದಲಕ್ಕೆ ಮತ್ತು ಸರ್ಕಾರವನ್ನು ಇಕ್ಕಟಿಗೆ ಸಿಕ್ಕಿಸಬೇಕೆನ್ನುವುದು ನಮ್ಮ ಆಸಕ್ತಿಯಲ್ಲ. ನಮ್ಮ ಆಸಕ್ತಿ ಏನೆಂದರೆ ಇಂಥ ವಿಶೇಷವಾದ ಪರಿಸ್ಥಿತಿಯಲ್ಲಿ ಅವರು ಸರ್ವಪ್ರಯತ್ನವನ್ನೂ ಮಾಡುತ್ತೇವೆಂದು ಹೇಳಿದ್ದೀರಿ. ಅಂಥ ಪ್ರಯತ್ನಗಳಲ್ಲಿ ಯಾವುದಾದರೊಂದು ಪ್ರಯತ್ನವನ್ನು ನಮ್ಮ ಗಮನಕ್ಕೆ ಅವರು ತರಲು ಸಾಧ್ಯವೇ ಎನ್ನತಕ್ಕದನ್ನು ಮಾನ್ಯ ಉಪಮುಖ್ಯಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಎಸ್.ಎಂ. ಕೃಷ್ಣ:– 460 ಕೋಟಿ ರೂಪಾಯಿಗಳನ್ನು ಈ ಯೋಜನೆಗಳಿಗೆ ಒದಗಿಸಿರುವುದೇ ಸರ್ವಪ್ರಯತ್ನದ ಮೊದಲ ಮೆಟ್ಟಿಲು. ಮುಂದಿನ ವರ್ಷ ಎರಡನೆಯ ಮೆಟ್ಟಿಲಿಗೆ ಹೋಗುತ್ತೇವೆ.